

### ಸಚಿನ್: ಅಪಾರ ಮಾಹಿತಿ

ಸಚಿನ್ ದಿ ಗ್ರೇಟ್ ಗಿರೀಶ ದೊಡ್ಡಮನಿಯವರ ಲೇಖನ ಸರಾಗವಾಗಿ ಓದಿಸಿಕೊಂಡು ಹೋಯಿತು. ಸಾಕಷ್ಟು ಮಾಹಿತಿಯೂ ಇತ್ತು.

-ಪವನ್ ಪ್ರಹ್ಲಾದ್, ತಿಪಟೂರು/ ಮಹಾವೀರ ಕಾಸಾರ, ಚನ್ನಗಿರಿ/ ಪಿ.ಗೋವಿಂದರಾಜ್, ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಸತೀಶ ಶೆಟ್ಟಿಗಾರ್, ಜಪ್ತಿ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಎಚ್.ಪಿ.ಸುರೇಶ್, ಬೆಂಗಳೂರು/ ದೀಪಕ್, ಕಂಬದಕೋಣೆ/ ಸಂಜಯ ಕುಮಾರ್, ಕೋಣನಕೇರಿ

### ಏಳು ಸಾವಿರ ಅಲ್ಲ

ಸಚಿನ್ ಕುರಿತ ಲೇಖನದ 19ನೇ ಪುಟದಲ್ಲಿ ಇದು ನಿಮಗೆ ಗೊತ್ತೆ? ಬಾಕ್ಸ್ ಸುದ್ದಿಯಲ್ಲಿ ಟೆಸ್ಟ್ ಆಡುವ ಏಳು ದೇಶಗಳಲ್ಲಿ ಪ್ರತಿಯೊಂದರ ವಿರುದ್ಧ ಏಳು ಸಾವಿರ ಗಳಿಸಿದ್ದಾರೆ ಎಂದರೆ 49 ಸಾವಿರ ಆಗು ತ್ತಲ್ಲವೇ? ಇದು ಒಂದು ಸಾವಿರ ಆಗ ಬೇಕಿತ್ತಲ್ಲವೇ? ಹಾಗೆಯೇ ವಿಶ್ವದ ಹತ್ತು ಶ್ರೇಷ್ಠ ಇನ್ನಿಂಗ್ಸ್‌ಗಳಲ್ಲಿ ಗ್ಯಾರಿ ಕರ್ಸ್ಟನ್ 1996ರ ವಿಶ್ವಕಪ್‌ನಲ್ಲಿ ಯುಎಇ ವಿರುದ್ಧ ಗಳಿಸಿದ 188 ಬಿಟ್ಟು ಹೋಗಿದೆ.

-ಎಸ್.ವಿ.ಶ್ರೀನಿವಾಸ ಮೂರ್ತಿ, ಮೆಣಸೆ

### ವಿದ್ಯುತ್ ಉಳಿಸೋದು ಹೇಗೆ?

ಈಚಿನ ದಿನಗಳಲ್ಲಿ ದಿನಕ್ಕೆ 10-12 ಗಂಟೆಗಳ ಕಾಲ ಕೆಇಬಿಯವರೇ ಪವರ್ ಕಟ್ ಮಾಡುವುದರಿಂದ ಲೇಖನ ಎಷ್ಟು ಪ್ರಸ್ತುತವೆಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತ್ತು.

-ನೇ. ರಾಜಶೇಖರ, ಕುಕ್ಕೆ ಸುಬ್ರಹ್ಮಣ್ಯ/ ಎಂ.ಜಿ.ರಾಜಶೇಖರ ಶೆಟ್ಟಿ, ದೊಡ್ಡಬಳ್ಳಾಪುರ

### ನೀರಾಹಾರಿ ತಾರೆಯರು!

'ಸೌಂದರ್ಯದ ಗುಟ್ಟು' (ಬ್ಯೂಟಿ ಟಿಪ್ಸ್-ಸುಮಾ) ಬಾಲಿವುಡ್‌ನ ಬಹುತೇಕ ತಾರೆಯರು... ಅತ್ಯಂತ ಹೆಚ್ಚು ನೀರು ಕುಡಿಯುತ್ತಾರೆ. ಅಂತೂ ನೀರಿಗೂ ನೀರೆಯರಿಗೂ ಅವಿನಾಭಾವ ಸಂಬಂಧ! ಅವರು ಸ್ವತಃ ನೀರು ಕುಡಿಯುವುದಲ್ಲದೆ, ನೋಡುವ (ಪುರುಷ)ರಿಗೂ 'ನೀರು ಕುಡಿಸು'ತ್ತಾರೆ ಎನ್ನಬಹುದೆ?

-ಸಿಪಿಕೆ, ಮೈಸೂರು

### ಮಕ್ಕಳಿಗೆ ಉಪಯುಕ್ತ

'ನನ್ನ ಮಗ ಪುಸ್ತಕ ಓದಲ್ಲ' ನಡಹಳ್ಳಿ ವಸಂತ್ ಲೇಖನ ಮಕ್ಕಳಿಗೆ ಪುಸ್ತಕ ಪ್ರೀತಿಯನ್ನು ಉಂಟು ಮಾಡುವ ಬಗ್ಗೆ ಕಣ್ತೆರೆಸುವ ಲೇಖನ.

-ತರಂಗಿಣಿ, ತುಮಕೂರು/ ಸೌದಾಮನೀ ಪ್ರಭಾಕರ, ಹಾಸನ

### ಹೊಸ ಬೆಳಕು

ಗೋಲ್ಕೊಂಡಾದ ಸುಲ್ತಾನನಾದ ಮೊಹಮ್ಮದ ಕೂಲಿ ತಮ್ಮ ಅಮರ ಪ್ರೇಮಕ್ಕೆ ಸಾಕ್ಷಿಯಾಗಿ ಚುಚ್ಚುಲಂ ಹಳ್ಳಿಯಿದ್ದ ಜಾಗೆಯಲ್ಲಿಯೆ ಹೈದರಾ ಬಾದ್ ನಗರವನ್ನು ನಿರ್ಮಿಸಿದ್ದು ದಿವಂಗತ ಲಕ್ಷ್ಮಣ ಅಳವಂಡಿಯವರ 'ಒಂದು ಪ್ರೇಮ ನಗರಿಯ ಕಥೆ!' ಯಿಂದ ತಿಳಿದುಬಂದಿತು. ಭಾಗ್ಯ ನಗರವಾಗಿದ್ದ ನಗರ ಹೈದರಾಬಾದ್ ಎಂದು ಬದಲಾದ ವಿಷಯ ವನ್ನು ತಿಳಿಸುವ ಈ ಸಂಚಿಕೆ ಸಂಗ್ರಹ ಯೋಗ್ಯ.

-ಅಬ್ದುಲ್ ವಹ್ಹಾಬ್ ಮುಲ್ಲಾ, ಗಂಗಾವತಿ/ ಕೊಪಿಮ, ಬಸರಕೋಡು

### ಶ್ರೀಧರಮೂರ್ತಿ ನೆನಪು

'ನೀವು ಕೇಳಿದಿರಿ' ಅಂಕಣದಲ್ಲಿ ಸೊಂ.ನಾ. ಶ್ರೀಧರ ಮೂರ್ತಿ ಪ್ರಶ್ನೆ ಓದಿ ಉತ್ತರ ಚೆನ್ನಾಗಿದೆ ಎನ್ನುತ್ತಿರು ವಾಗಲೇ ಕೆಳಗಡೆ ಬಾಕ್ಸ್ ಮಾಹಿತಿ ಓದಿ ಹೃದಯ ಹಿಂಡಿದಂತಾಯ್ತು. 'ಸುಧಾ' ಪತ್ರಿಕೆಯು ಓದುಗರ ದುಃಖದಲ್ಲೂ ಭಾಗಿಯಾಗಿ ನೆನೆದದ್ದು ಶ್ಲಾಘನೀಯ.

-ಕಾಳೀಹುಂಡಿ ಶಿವಕುಮಾರ, ಮೈಸೂರು/ ಪಿ.ಎಸ್. ಶ್ರೀವತ್ಸ, ಬೆಂಗಳೂರು/ ಪ್ರಹ್ಲಾದ ರಾಜು ಬುರ್ಲಿ, ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಬಿ.ಎಸ್.ರಮೇಶ್, ಬೆಂಗಳೂರು/ ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ

#### ಇ-ಮೇಲ್ ವಿಳಾಸ

ಧೀರ ಮಹಿಳೆ ಜಾಕ್ವೆಲಿನ್‌ರ ಇಮೇಲ್ ವಿಳಾಸ ಕಳೆದ ವಾರ ತಪ್ಪಾಗಿ ಪ್ರಕಟವಾಗಿದೆ. ಸರಿಯಾದ ಇ-ಮೇಲ್ ವಿಳಾಸ ಈ ರೀತಿ ಇದೆ: jaclyncol@gmail.com

- ಸಂ

### ಉತ್ತಮ ಧಾರಾವಾಹಿ

ಸಾಮಾನ್ಯವಾಗಿ ಮಹಿಳೆಯರ ಧಾರಾವಾಹಿ ಗಳೆಂದರೆ ಅಡಿಗೆ ಮನೆ ಸಾಹಿತ್ಯ ಎಂದು ಕಡೆಗಣಿ ಸುತ್ತಾರೆ. ಆದರೆ ಶೈಲಜಾ ಹಾಸನ ಅವರು ರೈತನ ಆತ್ಮಹತ್ಯೆಯ ಪರಿಣಾಮಗಳಂತಹ ದಾರುಣ ಸಮಸ್ಯೆ ಎತ್ತಿಕೊಂಡು ಆಕರ್ಷಕವಾಗಿ ಬರೆದಿದ್ದಾರೆ. ಧಾರಾವಾಹಿ ಚೆನ್ನಾಗಿ ಮೂಡಿ ಬರುತ್ತಿದೆ.

- ಆರ್. ಭೀಮಾರೆಡ್ಡಿ, ದಾವಣಗೆರೆ/ ಟಿ.ಎನ್. ಷಣ್ಮುಖ, ಭರಮಸಾಗರ/ ಎಚ್.ವಿಶ್ವನಾಥ, ಹಾಸನ

### ಇಳಾ ಹೋರಾಟ ಮಾದರಿ

ತಂದೆಯ ಆತ್ಮಹತ್ಯೆಯಿಂದ ಇಳಾಳ ಮೆಡಿಕಲ್ ಓದಿನ ಕನಸು ಭಗ್ನವಾಯಿತು. ಆದರೂ ಧೃತಿಗೆಡದೆ ಅವಳು ಜೀವನವನ್ನು ಎದುರಿಸಿದ ಬಗೆ ಮತ್ತೊಬ್ಬರಿಗೆ ಮಾದರಿಯಾಗುವಂತಿದೆ. ಇಂತಹ ಉನ್ನತ ಸಂದೇಶ ಹೊಂದಿದ ಧಾರಾವಾಹಿಗಳನ್ನು ಹೆಚ್ಚಾಗಿ ಪ್ರಕಟಿಸಿರಿ.

- ಎಚ್.ಎಸ್.ಹೊನ್ನೇಗೌಡ, ಶಿವಮೊಗ್ಗ



### ಹೆಚ್ಚಿನ ಧಾರಾವಾಹಿ ಬರಲಿ

'ಇಳಾ' ಚೆನ್ನಾಗಿ ಮೂಡಿ ಬರುತ್ತಿದೆ. ಇದೇ ತರಹ ಇನ್ನೂ ಹೆಚ್ಚಿನ ಧಾರಾವಾಹಿಗಳು ಮೂಡಿಬರಲಿ. ಮಹಾಭಾರತ, ರಾಮಾಯಣದ ಕುರಿತು ಕಾದಂಬರಿ ಅಲ್ಲವಾದರೂ, ಕಥೆ ಗಳನ್ನಾದರೂ ಆಗಾಗ ಪ್ರಕಟಿಸಿರಿ.

-ಗೀತಾಂಜಲಿ ಗೌಡ, ಕೊಟ್ಟೂರು




ಬಿಳಿ ಮಚ್ಚೆಗಳೆ

ಪರಿಣತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



ಲೈಂಗಿಕ ಸಮಸ್ಯೆ

ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು- ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881
09931840701 / 09334221088
09431025482 / 09835671211